ಗಡಿಯಾರದ ಮುಳ್ಳು ಗೋವಿಂದ ಭಟ್ಟನಂತಲ್ಲ, ತಾನಾಯಿತು ತನ್ನ ಪಾಡಾಯಿತು ಎಂದು ಚಾಚೂ ತಪ್ಪದೆ ಸಮಯ ತೋರಿಸುತ್ತಿತ್ತು! ಬೆಳಗ್ಗೆ ಆರೂವರೆ, ಗೋವಿಂದ ಭಟ್ಟನ ಗೊರಕೆ ಇನ್ನೂ ನಿಂತಿರಲಿಲ್ಲ, ಶಾರದಕ್ಕ ಕೊಟ್ಟಿಗೆಯ ಕೆಲಸವನ್ನೆಲ್ಲಾ ಪೂರೈಸಿ ಗಂಟಿಗಳನ್ನು ಬ್ಯಾಣಕ್ಕೆ ಅಟ್ಟಿ, ಕೈಕಾಲು ತೊಳೆದು ಬಂದು ಮಗಳನ್ನು ಎಬ್ಬಿಸಿ, ಎರಡನೇ ಸುತ್ತಿನ ಕಾಫಿ ಹೀರುವಾಗ ಗಡಿಯಾರದ ಸಣ್ಣ ಮುಳ್ಳು ಏಳರತ್ತ ಬಂದು ನಿಂತಿತು. ಶ್ಯಾಮರಾಯರು ಕೊಟ್ಟಿಗೆ ತೊಳೆದು, ಬಚ್ಚಲ ಹಂಡೆಯ ಅಂಡಿಗೆ ಇನ್ನಷ್ಟು ಕಟ್ಟಿಗೆ ಹೆಟ್ಟಿ, ಕಾಂಪೌಂಡಿನ ಮೇಲೆ ಕನ್ನಡಿಯಿಟ್ಟು ಗಡ್ಡ ಕೆರೆದು ಮುಗಿಸಿ ಸ್ನಾನಕ್ಕೆ ಓಡುವಾಗ ಕಾಲು ಗಸಕ್ಕನೆ ಜಾರಿತು. ಕೈಯಲ್ಲಿದ್ದ ಶೇವಿಂಗ್ ಸೆಟ್ಟು ನೆಲಕ್ಕೆ ಬಿದ್ದು, ಶ್ಯಾಮರಾಯರು ಕಾಲು ನೋಡಿಕೊಳ್ಳಲು, ಜಗುಲಿಯ ಮೂಲೆಯಲ್ಲಿ ಮಲಗಿದ್ದ ಕರಿನಾಯಿ ಬಾಲ ಅಲ್ಲಾಡಿಸಿತು. ರಾತ್ರಿ ಹೊಟ್ಟೆಬಿರಿಯುವಂತೆ ನಾಯಿಗೆ ಅನ್ನ ಹಾಕಿದ ಶಾರದಕ್ಕನಿಗೆ ಮನಸಾರೆ ಬೈದ ಶ್ಯಾಮರಾಯರು, ಬಟ್ಟಲಷ್ಟು ಕಕ್ಕಿದ್ದ ನಾಯಿಯನ್ನು ಮೆತ್ತಗೆ ಮಾತಾಡಿಸಿ ಉಪಚರಿಸಿದಂತೆ ಮಾಡಿ ಹತ್ತಿರ ಕರೆದು ಬೆನ್ನ ಹಿಂದೆ ಅಡಗಿಸಿಟ್ಟುಕೊಂಡಿದ್ದ ಬೆತ್ತವನ್ನು ಬಿಗಿ ಹಿಡಿದು ಬೀಸಲು ಗೋವಿಂದ ಭಟ್ಟನಿಗೆ ಎಚ್ಚರವಾಯಿತು! ಪ್ರಪಂಚವೇ ತಲೆಕೆಳಗಾದಂತೆ ಅತ್ತಿತ್ತ ತಿರುಗಿ ಧಡಧಡನೆ ಎದ್ದು ಚಾಪೆ ಸುತ್ತಿಟ್ಟು, ಮಾತ್ರೆ ಪವರಿಂದ ಈಗೀಗ ನಿದ್ದೆಯೂ ಜಾಸ್ತಿ ಎಂದು ತನ್ನಷ್ಟಕ್ಕೇ ಗೊಣಗುತ್ತಾ, ಶಾಸ್ತ್ರಕ್ಕೊಂದು ಸ್ನಾನ ಮುಗಿಸಿ, ಶಾರದಕ್ಕನಿಂದ ಶುಗರ್‌ಲೆಸ್ ಕಾಫಿ ಮಾಡಿಸಿಕೊಂಡು, ಕದ್ದುಮುಚ್ಚಿ ಮೂರು ಚಮಚ ಸಕ್ಕರೆ ಸುರಿದುಕೊಂಡು, ಅದೇ ಕಾಫಿಯೊಟ್ಟಿಗೆ ಶುಗರ್ ಕಂಟ್ರೋಲಿಗೆ ಡಾಕ್ಟರು ಕೊಟ್ಟ ಮಾತ್ರೆಯನ್ನು ನುಂಗಿದ ಗೋವಿಂದ ಭಟ್ಟ ಅಂಟು ಅಂಟಾಗಿದ್ದ ತನ್ನ ಮೀಸೆಯನ್ನು ಮಡಿಬಟ್ಟೆಯ ತುದಿಯಿಂದಲೇ ಒರೆಸಿಕೊಂಡು ಪೂಜೆಗೆ ಹೊರಟ. ಅಷ್ಟರಲ್ಲಿ ಸ್ನಾನ ಮುಗಿಸಿಕೊಂಡು ಬಂದ ಶ್ಯಾಮರಾಯರು ಆತನ ಕಡೆ ತಿರುಗಿ, "ಸಾಕೋ ಮಾರಾಯ ನಿನ್ನ ಸಹವಾಸ... ಗಂಟೆ ಎಂಟಕ್ಕೆ ಬಂದ್ರೂ ಇನ್ನೂ ಪೂಜೆಗೇ ಹೊರ್ಟಿಲ್ವಾ. ನೀ ಹಿಂಗೇ ಮಾಡ್ತಿದ್ರೆ ದೇವ್ರು ನಮ್ ದೇವಸ್ಥಾನ ಬಿಟ್ ಹೋದ್ರೂ ಆಶ್ಚರ್ಯ ಇಲ್ಲ!... ಹೋಗು ಹೋಗು ನಾಳೆಯಿಂದ ಬೇಗ ಪೂಜೆ ಆಗ್ಬೇಕು, ಹಿಂಗೆಲ್ಲಾ ಮಾಡಿದ್ರೆ ಆಗಲ್ಲ" ಎಂದು ಪ್ರತಿನಿತ್ಯದಂತೆ ಎಚ್ಚರಿಕೆ ಕೊಟ್ಟರು ಮತ್ತು ಗೋವಿಂದ ಭಟ್ಟ ಯಥಾಪ್ರಕಾರ ಹಲ್ಲುಕಿರಿಯುತ್ತಾ ಪೂಜೆಗೆ ಹೊರಟ.

ಗೋವಿಂದ ಭಟ್ಟ ಐವತ್ತರ ಗಡಿ ದಾಟಿದ ಶತಸೋಂಭೇರಿ ಬ್ರಹ್ಮಚಾರಿ. ಬಾಲ್ಯದಲ್ಲಿ ವಿದ್ಯೆ ತಲೆಗೆ ಹತ್ತದ ಕಾರಣ ಅವರಪ್ಪ ವೇದ ಕಲಿಯಲೆಂದು ಆತನನ್ನು ಉಡುಪಿಯಲ್ಲಿ ಬಿಟ್ಟರು. ಉಡುಪಿಯ ರಥಬೀದಿಯಲ್ಲಿ ಅಂಡಲೆದ ಗೋವಿಂದ ಅವರಿವರಿಂದ ಒಂದಷ್ಟು ಬೈಸಿಕೊಂಡು ಹಲ್ಲುಕಿರಿಯುವುದನ್ನು ಅಭ್ಯಾಸ ಮಾಡಿಕೊಂಡನೇ ವಿನಃ ವೇದ ಕಲಿಯಲಿಲ್ಲ. ಉಡುಪಿಗೆ ಹೋದ ಎರಡೇ ವರ್ಷದಲ್ಲಿ ಅವನ ಹಣೆಬರಹಗಳೆಲ್ಲಾ ಪತ್ರ ರೂಪದಲ್ಲಿ ತಂದೆ ವೆಂಕಟ ಭಟ್ಟರ ಕೈ ಸೇರಲು, ಹಿಂದೆ ಮುಂದೆ ಯೋಚಿಸದೇ ಮನೆಗೆ ಎಳೆದುಕೊಂಡು ಬಂದರು. ಶಿವಮೊಗ್ಗದ ಸೋಮಿನಕೊಪ್ಪದಲ್ಲಿದ್ದ ಇಪ್ಪತ್ತು ಮೂವತ್ತು ಅಳತೆಯ ಚಿಕ್ಕ ಮನೆಯೊಳಗೆ ಗೋವಿಂದನಿಗೆ ತಂದೆಯಿಂದಲೇ ವೇದಾಭ್ಯಾಸ ಶುರುವಾಯಿತು. ಅತ್ತ ಗೋವಿಂದನ ತಮ್ಮ ಗುರುರಾಜ ಡಿಗ್ರಿ ಕಲಿತು ಪರೀಕ್ಷೆ ಕಟ್ಟಿ ಬ್ಯಾಂಕಿನ ಕೆಲಸಕ್ಕೆ ಸೇರಿದರೆ ಗೋವಿಂದ ನಿತ್ಯಪೂಜೆಯ ಮಂತ್ರ ಕಲಿತು ಹೇಳುವಷ್ಟರ ಮಟ್ಟಿಗೆ ಹದಗೊಂಡಿದ್ದ. ಇಷ್ಟೆಲ್ಲಾ ಆಗುವಷ್ಟರಲ್ಲಿ ಗೋವಿಂದನ ವಯಸ್ಸು ಮೂವತ್ತರ ಹೊಸ್ತಿಲು ದಾಟಿತ್ತು.

ಸಂಸಾರ ನಡೆಸಬೇಕಾದ ವಯಸ್ಸಲ್ಲಿ ಮಂತ್ರ ಕಲಿತವನಿಗೆ ಸೂಕ್ತ ವಧು ಹುಡುಕಲು